1868(2626) ಶ್ರೀ.ಸುನೀಲ್ ಕುಮಾರ್ ವಿ. (ಕಾರ್ಕಳ): ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಕೈಗಾರಿಕಾ ವಲಯವನ್ನು ಸ್ಥಾಪಿಸುವ ಸಲುವಾಗಿ ವಿಶೇಷ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ;

ಆ) ಉಡುಪಿ ಜಿಲ್ಲೆಯಲ್ಲಿರುವ ಕೈಗಾರಿಕೆಗಳು ಯಾವುವು (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳವಾರು, ತಾಲ್ಲೂಕುವಾರು, ವಿವರ ಒದಗಿಸುವುದು);

ಇ) ನಷ್ಟದಲ್ಲಿರುವ, ಹಾಗೂ ಬೀಗಮುದ್ರೆಗೆ ಬಂದಿರುವ ಕೈಗಾರಿಕಾ ಘಟಕಗಳ ಪುನಃಶ್ಚೇತನಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಕೈಗಾರಿಕಾ ವಲಯಕ್ಕೆ ಗುರುತಿಸಿರುವ ಸ್ಥಳಗಳಾವುವು ಹಾಗೂ ಯಾವ ಯಾವ ಕೈಗಾರಿಕೆಗಳನ್ನು ಅಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು):

ಅ) ಉಡುಪಿ ಜಿಲ್ಲೆಯಲ್ಲಿ ವಿಶೇಷ ಕೈಗಾರಿಕಾ ವಲಯ ಸ್ಥಾಪಿಸುವ ಯಾವುದೆ ಪ್ರಸ್ತಾಪ ಸರ್ಕಾರದ ಮುಂದೆ ಇರುವುದಿಲ್ಲ. ಆದರೆ, ಜಿಲ್ಲೆಯ ಪಡುಬಿದರಿಯಲ್ಲಿ 110 ಎಕರೆ ವಿಸ್ತೀರ್ಣದ ಕೈಗಾರಿಕಾ ಪ್ರದೇಶ ಸ್ಥಾಪನೆ ಬಗ್ಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಪರಿಶೀಲಿಸುತ್ತಿದೆ.

ಆ) ಉಡುಪಿ ಜಿಲ್ಲೆಯಲ್ಲಿನ ಕೈಗಾರಿಕೆಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸ.	ತಾಲ್ಲೂಕು	ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು	ಸಣ್ಣ ಕೈಗಾರಿಕೆಗಳು
1.	ಉಡುಪಿ	8	3058
2.	ಕುಂದಾಪುರ	0	2377
3.	ಕಾರ್ಕಳ	3	1394
	ಒಟ್ಟು	11	6829

ಇ) ರೋಗಗ್ರಸ್ತ ಭಾರಿ ಮತ್ತು ಮಧ್ಯಮ ಕಾರ್ಖಾನೆಗಳ ಪುನಃಶ್ಚೇತನ ಕಾರ್ಯಕ್ರಮವನ್ನು ರೋಗಗ್ರಸ್ತ ಘಟಕಗಳು (ವಿಶೇಷ ಅವಕಾಶಗಳು) ಕಾಯ್ದೆ 1985ರಡಿಯಲ್ಲಿ ಬಿಐಎಫ್ಆರ್., ಸಂಸ್ಥೆಯ ಆದೇಶದನ್ವಯ ಕೈಗೊಳ್ಳಲಾಗುತ್ತಿದೆ.

ರೋಗಗ್ರಸ್ತ ಸಣ್ಣ ಕೈಗಾರಿಕೆಗಳನ್ನು ಆರ್‌ಬಿಐ., ನಿಯಮಗಳಾನುಸಾರ ಗುರುತಿಸಿ, ಪುನಃಶ್ಚೇತನ ಕಾರ್ಯಕ್ರಮಗಳನ್ನು ಗುರುತಿಸಿ, ಪುನಃಶ್ಚೇತನ ಕಾರ್ಯಕ್ರಮಗಳನ್ನು ಸಂಬಂಧಪಟ್ಟ ಹಣಕಾಸು ಸಂಸ್ಥೆಗಳು/ ಬ್ಯಾಂಕುಗಳ ಸಹಯೋಗದೊಂದಿಗೆ ಕೈಗೊಳ್ಳಲಾಗುತ್ತಿದೆ. ಸರ್ಕಾರಿ ಆದೇಶ ಕ್ರಮ ಸಂಖ್ಯೆ:ಸಿಐ 167 ಎಸ್‌ಪಿಐ 2001 ದಿನಾಂಕ 26-9-2002 ರನ್ವಯ ಈ ಕೆಳಕಂಡ ನೆರವು/ರಿಯಾಯಿತಿಗಳನ್ನು ನೀಡಲಾಗುತ್ತಿದೆ.

1. ಘಟಕದ ಪುನಶ್ಚೇತನಕ್ಕೆ ರೂ.2.50 ಲಕ್ಷಕ್ಕೆ ಮೀರದಂತೆ ಬೀಜಧನ ಸಾಲ ನೆರವು.

2. ವಿದ್ಯುತ್‌ಚ್ಛಕ್ತಿ ಬಾಕಿಯನ್ನು 6 ಅರ್ಧವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ ಹಾಗೂ ಮುಚ್ಚಲ್ಪಟ್ಟ ಅವಧಿಯಲ್ಲಿ ಕನಿಷ್ಠ ದರ ಪಾವತಿಯಲ್ಲಿ ವಿನಾಯಿತಿ.

3. ವಾಣಿಜ್ಯ ತೆರಿಗೆ ಬಾಕಿಯನ್ನು 6 ಅರ್ಧವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

4. ಕೈಗಾರಿಕಾ ಇಲಾಖೆಯಿಂದ ಪಡೆದ ಅಭಿವೃದ್ಧಿ/ದುಡಿಯುವ ಬಂಡವಾಳ ಸಾಲದ ಕಂತುಗಳನ್ನು ಮುಂದೂಡಿ 6 ಅರ್ಧವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

5. ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ, ಸಂಸ್ಥೆಗಳಿಗೆ ನೀಡಬೇಕಾದ ಕಂತುಗಳನ್ನು 4 ಸಮ ವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

ಈ) ಉತ್ತರವು (ಅ) ರಲ್ಲಿರುವಂತೆ.

1869(2628) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ): ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಸೀದಿಗಳಿಗೆ ಮಾಲ್ವಿಗಳ ನೇಮಕಾತಿಗಳಿಗೆ ನಿಯಮಗಳೇನಾದರೂ ಇದೆಯೇ?

ಆ) ಇದಕ್ಕೆ ಮೀಸಲಾತಿ ಏನಾದರೂ ಇದೆಯೇ ವಿವರ ನೀಡುವುದು?

ಇ) ಈ ಮಾಲ್ವಿಗಳಿಗೆ ನೀಡುವ ವೇತನ, ಭತ್ಯೆ ವಿವರ ಒದಗಿಸಿರಿ, ನೇಮಕಾತಿಗೆ ಪರಿಗಣಿಸುವ ಅರ್ಹತೆ, ಮಾನದಂಡಗಳೇನು?

ಈ) ಇಂತಹ ಮಾಲ್ವಿಗಳ ಸಂಖ್ಯೆ ರಾಜ್ಯದಲ್ಲಿ ಎಷ್ಟಿದೆ (ಜಿಲ್ಲಾವಾರು ವಿವರ ನೀಡುವುದು):

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈ ಬಗ್ಗೆ ಸರ್ಕಾರದಿಂದ ಯಾವುದೇ ನಿರ್ದಿಷ್ಟವಾದ ಮಾರ್ಗಸೂಚಿ ನೀಡಿರುವುದಿಲ್ಲ. ಅದಕ್ಕೆ ಪ್ರತಿ ಸಂಸ್ಥೆಯು ತನ್ನ ಆರ್ಥಿಕ ಸ್ಥಿತಿಗೆ ತಕ್ಕಂತೆ ಇಮಾಮ್‌ಗೆ (ಮಾಲ್ವಿ ಅಥವಾ ಇತರರು) ವೇತನ ಭತ್ಯೆ ನೀಡುವರು.

ಈ) ಉದ್ಭವಿಸುವುದಿಲ್ಲ.

1870(2620) ಶ್ರೀ ಸುನೀಲ್ ವಲ್ಲಾಪುರ (ಶಹಾಬಾದ್): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು (ಇಲಾಖಾವಾರು ವಿವರ ನೀಡುವುದು):

ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಬ್ಯಾಕ್‌ಲಾಗ್, ಹುದ್ದೆಗಳನ್ನು ತುಂಬಲಾಗಿದೆ (ಇಲಾಖಾವಾರು ಹಾಗೂ ವರ್ಷವಾರು ವಿವರ ನೀಡುವುದು):

ಇ) ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಸರ್ಕಾರ ಕಾಲಮಿತಿಯೇನಾದರು ವಿಧಿಸಿದೆಯೆ:

ಈ) ಹಾಗಿದ್ದಲ್ಲಿ ಪೂರ್ಣ ಪ್ರಮಾಣದಲ್ಲಿ ಯಾವಾಗ ತುಂಬಲಾಗುವುದು:

ಉ) ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಇರುವ ನಿಯಮಾವಳಿಗಳೇನು: